ದಿನಾಂಕ 30.09.2023 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುঃ-

ವಾದಿಯ ಪರ ವಕೀಲರು ಹಾಜರಿದ್ದು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಾಕ್ಷಿದಾರರು ಕ್ಯಾನ್ಸರ್ ಖಾಯಿಲೆಯಿಂದ ಬಳಲುತ್ತಿರುವುದಾಗಿ ಈಗಾಗಲೇ ಅವರ ಪರ ವಕೀಲರು ಸಾಕ್ಷಿದಾರರ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿದ್ದು ಹಾಗೂ ಈಗಾಗಲೇ ವಾದಿಯ ಪರ ವಕೀಲರ ಮನವಿಯ ಮೇರೆಗೆ ಪಾಟೀ ಸವಾಲಿಗಾಗಿ ವಾದಿಯ ಪರ ವಕೀಲರು ದಿನಾಂಕ 24.08.2022 ರಂದು ಹಾಗೂ ಆ ನಂತರದಲ್ಲಿ ದಿನಾಂಕ 08.08.2023 ರಂದು ಸಲ್ಲಿಸಲಾಗಿದ್ದ ಮಧ್ಯಂತರ ಅರ್ಜಿಗಳನ್ನು ಪುರಸ್ಕರಿಸಿ ಪಾಟೀ ಸವಾಲಿಗಾಗಿ ಸಾಕಷ್ಟು ಸಮಯಾವಕಾಶವನ್ನು ನೀಡಲಾಗಿರುವ ಕಾರಣ ಹಾಗೂ ಈ ದಿನ ಪಾಟೀ ಸವಾಲನ್ನು ಮುಂದೂಡಲು ಯಾವುದೇ ಸಮಂಜಸ ಕಾರಣಗಳು ಇಲ್ಲದ ಕಾರಣ ವಾದಿಯ ಪರ ವಕೀಲರ ಮನವಿಯನ್ನು ತಿರಸ್ಕರಿಸಿ, ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ಸರಸ್ವತಿ ಕೆ.ಎನ್.)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.